ಮಾಡಿರತಕ್ಕ ಕಾಲದಲ್ಲಿ ರೈತರಿಗೆ ಬಹಳ ತೊಂದರೆಯಾಗಿದೆ. ಬೆಳೆದಿರುವ ಕಬ್ಬನ್ನು ಸರಬರಾಜು ಮಾಡತಕ್ಕವರು ಕಾರ್ಖಾನೆಯವರು. ಅವರು ಕಬ್ಬು ಕೊಯ್ದ ಹತ್ತು-ಹದಿನೈದು ದಿವಸಗಳ ಮೇಲೆ ಲಾರಿಗಳನ್ನು ಕಳುಹಿಸಿ ಸರಬರಾಜು ಮಾಡಿಸಿದರು. ಈ ಅವಧಿಯಲ್ಲಿ ಕಬ್ಬಿನಲ್ಲಿರುವ ಸ್ಯಾಕ್ರಿನ್ ಅಂಶ ಕಡಿಮೆಯಾಗಿ ಸಕ್ಕರೆ ಇಳುವರಿ ಕಡಮೆಯಾಯಿತು. ಇದರಿಂದಾಗಿ ರೈತ ಮತ್ತು ಕಾರ್ಖಾನೆ-ಇಬ್ಬರಿಗೂ ತೊಂದರೆಯಾಯಿತು. ಅಲ್ಲದೆ, ರೈತನಿಂದ ಕಬ್ಬನ್ನು ಖರೀದಿಸಿದ ಏಳೆಂಟು ತಿಂಗಳ ಮೇಲೆ ಹಣವನ್ನು ಪಾವತಿ ಮಾಡಿದ್ದಾರೆ. ಈ ರಾಜ್ಯದಲ್ಲಿ ನಮ್ಮ ಸರ್ಕಾರ ಬಂದಮೇಲೆ ನಮ್ಮ ಮುಖ್ಯ ಮಂತ್ರಿಗಳಿಗೆ ಹೇಳಿ ಇದಕ್ಕಾಗಿ ಮೂವತ್ತು ಲಕ್ಷ ರೂಪಾಯಿಗಳನ್ನು ಕೊಡಿಸಲಾಯಿತು. ಈಗ ಕಾರ್ಖಾನೆ ಮುಚ್ಚಿದೆ ರೈತರ ಕಬ್ಬು ಬೆಳೆದಿದೆ. ಆದುದರಿಂದ, ರೈತರಿಗೆ ತೊಂದರೆಯಾಗದ ಹಾಗೆ ವ್ಯವಸ್ಥೆ ಮಾಡಬೇಕಾಗಿದೆ. ಅಲ್ಲದೆ, ಅನೇಕ ಜನ ರೈತರು ಕಬ್ಬನ್ನು ಬೆಳೆಯುವುದನ್ನೇ ನಿಲ್ಲಿಸಿಬಿಟ್ಟಿದ್ದಾರೆ. ರೈತರಿಂದ ಪ್ರತಿ ವರ್ಷ ಕೊಳ್ಳುತ್ತಿರುವ ಕಬ್ಬಿನ ಪ್ರಮಾಣ ಇಳಿಮುಖವಾಗುತ್ತಿರುವುದು ಕಾರ್ಖಾನೆ ಯಾವ ಸ್ಥಿತಿಯಲ್ಲಿ ಕೆಲಸ ಮಾಡುತ್ತಿದೆ ಎನ್ನುವುದನ್ನು ಎತ್ತಿತೋರಿಸುತ್ತದೆ. ಆದುದರಿಂದ, ಅಲ್ಲಿಗೆ ಒಳ್ಳೆಯ ಮ್ಯಾನೇಜಿಂಗ್ ಡೈರೆಕ್ಟರ್ ಅವರನ್ನು ನೇಮಿಸಿ ಕಾರ್ಖಾನೆಯನ್ನು ಚೆನ್ನಾಗಿ ನಡೆಸುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎ. ಬಿ. ಜಕನೂರ್.—ಮಾನ್ಯ ಸದಸ್ಯರು ಹೇಳಿದ ಎಲ್ಲ ಅಂಶಗಳನ್ನೂ ಪರಿಶೀಲಿಸಿ ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಎಂ. ಪಾದೇಗೌಡ.—೧೯೭೭-೭೮ರಲ್ಲಿ ಕಬ್ಬು ಬೆಳೆಯುವುದಕ್ಕೆ ರೈತರಿಗೆ ಬ್ಯಾಂಕಿನಿಂದ ಸಾಲ ಕೊಡಿಸಿ ಕಾರ್ಖಾನೆಯವರು ಗ್ಯಾರಂಟಿ ನಿಂತರು. ಅವರು ಕಬ್ಬು ಬೆಳೆದ ಮೇಲೆ ಸಾಲ ತೀರಿಸತಕ್ಕದ್ದು ಅವರ ಜವಾಬ್ದಾರಿ, ತೀರಿಸಬೇಕಾಗಿತ್ತು. ರೈತರಿಂದ ಕೊಂಡ ಕಬ್ಬಿಗೆ ಹಣವನ್ನು ಕಾರ್ಖಾನೆಯವರು ತಡ ಮಾಡಿ ಕೊಟ್ಟಿದ್ದಾರೆ ಮತ್ತು ಹಾಗೆ ತಡಮಾಡಿ ಕೊಟ್ಟಿರುವ ಕಾಲಕ್ಕೆ ಬಡ್ಡಿಯನ್ನು ಕೊಟ್ಟಿಲ್ಲ. ಆದರೆ, ರೈತರು ಮಾತ್ರ ಬ್ಯಾಂಕಿನಿಂದ ಪಡೆದ ಸಾಲಕ್ಕೆ ತಡವಾದ ಕಾಲಕ್ಕೆ ಬಡ್ಡಿ ಕೊಡಬೇಕಾಗಿದೆ. ಆದುದರಿಂದ, ಈ ವ್ಯತ್ಯಾಸದ ಮೊಬಲಗನ್ನು ಕಾರ್ಖಾನೆಯವರಿಂದ ರೈತರಿಗೆ ಕೊಡಿಸಿಕೊಡುವ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಎ. ಬಿ. ಜಕನೂರ್.—ಇದನ್ನು ಪರಿಶೀಲಿಸಲಾಗುವುದು.

ಅಧ್ಯಕ್ಷರು.—ಮಾನ್ಯ ಮುಖ್ಯ ಮಂತ್ರಿಗಳು ಮೇಲ್ಮನೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸಲು ತುರ್ತಾ ಹೋಗಬೇಕಾಗಿರುವುದರಿಂದ ಅವರಿಗೆ ಸಂಬಂಧಿಸಿದ ಶ್ರೀ ಚೌಡಯ್ಯನವರ ಗಮನ ಸೆಳೆಯುವ ಸೂಚನೆಯನ್ನು ಈಗ ತೆಗೆದುಕೊಳ್ಳಲಾಗುವುದು. ನಂತರ ಶ್ರೀಮತಿ ಗಜಾನನ ಶರ್ಮ ಅವರ ಗಮನ ಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳಲಾಗುವುದು.

(*ii*) *re* : *Assault on Sri Rakeeyappa, Doddakatti Village, Hiriyur Taluk.*

ಶ್ರೀ ಟಿ. ಚೌಡಯ್ಯ (ಭರಮಸಾಗರ).—ಮಾನ್ಯ ಅಧ್ಯಕ್ಷರೇ, ಹಿರಿಯೂರು ತಾಲ್ಲೂಕಿನ ದೊಡ್ಡಕಟ್ಟೆ ಗ್ರಾಮದ ಶ್ರೀ ರಾಖಿಯಪ್ಪ ಎಂಬುವರ ಮನೆಯನ್ನು ಸುಟ್ಟು ಹಾಕಿರುವುದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಆರ್. ಗುಂಡೂರಾವ್ (ಮಾನ್ಯ ಮುಖ್ಯ ಮಂತ್ರಿಗಳು).—ದೊಡ್ಡಕಟ್ಟೆ ಗ್ರಾಮವು ಹಿರಿಯೂರು ತಾಲ್ಲೂಕು ಉಪ್ಪಳಿ ಗ್ರಾಮದ ಮಜರೆಯಾಗಿದ್ದು, ಇದು ಹಿರಿಯೂರು ನಗರದಿಂದ ೧೨ ಮೈಲು ಪೂರ್ವ ದಿಕ್ಕಿನಲ್ಲಿರುತ್ತೆ. ಈ ಗ್ರಾಮದಲ್ಲಿ ನಾಚುಮುತ್ತು ಒಡೆಯರ್ ಮತ್ತು ಆತನ ತಮ್ಮ ಆರುಸ್ವಾಮಿ ಇವರುಗಳಿಗೆ ವೈಮನಸ್ಸಿರುತ್ತೆ. ಈ ವೈಮನಸ್ಸಿಗೆ ಕಾರಣ ನಾಚುಮುತ್ತು ಒಡೆಯರ್ ಅವರ ಮಗಳು ಬೇರೆ ಜಾತಿಯ ಗಂಡನ್ನು ಮದುವೆಯಾಗಿರುವುದು. ಮೇಲೆ ಕಾಣಿಸಿದ ಆರುಸ್ವಾಮಿಯು ನಾಚುಮುತ್ತು ಒಡೆಯರಿಗೆ ಖಾಸ ತಮ್ಮನಾಗಬೇಕು. ಇವರುಗಳೆಲ್ಲರೂ ಜಮೀನುದಾರಿಗಳಾಗಿದ್ದು ಚಿರಾಯ್ತಿಯಿಂದ ಜೀವನ ಮಾಡುತ್ತಿರುತ್ತಾರೆ. ಶ್ರೀ ರಾಖಿಯಣ್ಣ ಬಿನ್ ಚಿನ್ನಪ್ಪ ಎಂಬಾತನು ನಾಚುಮುತ್ತು ಒಡೆಯರ್ ಕೆಳಗೆ ಕೂಲಿಯಾಳು ಆಗಿ ಕೆಲಸ ಮಾಡುತ್ತಿರುತ್ತಾನೆ,

ತಾರೀಖು ೨೨ನೇ ಫೆಬ್ರುವರಿ ೧೯೮೦ ರಾತ್ರಿ ಆರುಸ್ವಾಮಿ ಅವರ ಕಡೆಗೆ ಸೇರಿದ ಟಿ. ಶಂಬುಲಿಂಗಂ ಮತ್ತು ಕೆ. ನಟರಾಜ ಇವರ ಬಾಬ್ತು ಎರಡು ಪೆಟ್ರೋಲ್ ಬಂಕಿಗೆ ಯಾರು ಬೆಂಕಿ ಇಟ್ಟಿದ್ದರ ಪರಿಣಾಮವಾಗಿ ಸದರಿ ಮನೆಗಳಲ್ಲಿದ್ದ ಮೋಟಾರು ವಗೈರೆ ಬೆಂದು ಹೋಗಿರುತ್ತೆ. ಈ ವಿಚಾರದಲ್ಲಿ ಟಿ. ಶಂಬುಲಿಂಗಂ ಮತ್ತು ಕೆ. ನಟರಾಜ ಇವರುಗಳು ಕೊಟ್ಟ ಪಿರ್ಯಾದಿಯ ಮೇಲೆ ಹಿರಿಯೂರು ಠಾಣೆ ಮೊ ನಂ. ೧೭ ಮತ್ತು ೧೮-೮೦ ಕಲಂ ಪ್ರಕಾರ ಕೇಸು ದಾಖಲಾಗಿರುತ್ತೆ. ಈ ಬೆಂಕಿ ಘಟನೆಯಲ್ಲಿ ಮೇಲ್ಕಂಡ ಪಿರ್ಯಾದುದಾರರು ರಾಖಿಯಣ್ಣ ಮತ್ತು ಮೈಲಪ್ಪ ಎಂಬುವರ ಮೇಲೆ ಸಂಶಯಪಟ್ಟಿರುತ್ತಾರೆ. ಆದರೆ ಈ ಸಂಶಯಕ್ಕೆ ಸರಿಯಾದ ಆಧಾರ ಸಾಕ್ಷಿಗಳು ಇರುವುದಿಲ್ಲ. ಈ ಎರಡು ಮೇಲ್ಕಂಡ ಕೇಸುಗಳು ಇನ್ನು ತನಿಖೆಯಲ್ಲಿದ್ದು ಮೇಲ್ಕಂಡ ರಾಖಿಯಣ್ಣನು ಸಹ ತನಿಖೆ ಕಾಲದಲ್ಲಿ ತನಿಖಾಧಿಕಾರಿಯು ಠಾಣೆಗೆ ಕರೆದು ವಿಚಾರಣೆ ಮಾಡಿ ಬಿಟ್ಟಿರುತ್ತಾರೆ.

ತಾರೀಖು ೨೪ನೇ ಏಪ್ರಿಲ್ ೧೯೮೦ ರಂದು ಬೆಳಗಿನ ಜಾವ ಸುಮಾರು ೩ ಘಂಟೆ ಸಮಯದಲ್ಲಿ ವೆಂಕ್ಟಂಡ ರಾಖಿಯಣ್ಣ ಬಿನ್ ಚಿನ್ನಪ್ಪ ಇವರಿಗೆ ಸೇರಿದ ದೊಡ್ಡಕಟ್ಟೆ ಗ್ರಾಮದಲ್ಲಿರುವ ಹೊಸದಾಗಿ ನಿರ್ಮಾಣವಾಗುತ್ತಿರುವ ಹಂಚ್ಚಿನ ಗೋಡೆಯು ಗರಿಯಿಂದ ಹೊದ್ದಿಸಿರುವ ಮೇಲ್ ಚಾವಣಿ ಬೆಂಕಿಯಿಂದ ಸುಟ್ಟು ಹೋಗಿರುತ್ತೆ. ಈ ವಿಚಾರದಲ್ಲಿ ರಾಖಿಯಣ್ಣನು ತಾರೀಖು ೨೪ನೇ ಏಪ್ರಿಲ್ ೧೯೮೦ ರಂದು ಮಧ್ಯಾಹ್ನ ೧ ಘಂಟೆ ಸಮಯದಲ್ಲಿ ಹಿರಿಯೂರು ಠಾಣೆಗೆ ಹಾಜರಾಗಿ ಮೇಲ್ಕಂಡ ಘಟನೆಯನ್ನು ಪಿ. ಎಸ್. ಐ. ರವರ ಮುಂದೆ ತಿಳಿಸಿದ ಮೇರೆಗೆ ಆತನ ಹೇಳಿಕೆಯನ್ನು ಲಿಖಿತದ ಮೂಲಕ ತಿಳಿದು ಕೊಂಡು ಹಿರಿಯೂರು ಠಾಣೆ ಮೊ. ನಂ. ೪೫೩-೮೦, ೪೫೪ನೇ ಕಲಂ ಪ್ರಕಾರ ಕೇಸುದಾಖಲು ಮಾಡಿ ಕೊಂಡು ಜರೂರು ತನಿಖೆಯನ್ನು ನಡೆಸಿರುತ್ತೆ. ಈ ಬೆಂಕಿ ದುರಂತದಲ್ಲಿ ಪಿರ್ಯಾದಿ ರಾಖಿಯಣ್ಣನು ಮೇಲ್ಕಂಡ ಆರುಸ್ವಾಮಿಯ ಕಡೆಗೆ ಸೇರಿದವರಾದ ಜೆಲುವರಾಜ, ಜಯಬಾಲಪ್ಪ, ಎಂ. ಆರುಮುಗಪ್ಪ, ಎ ಸುಬ್ರಮಣ್ಯಂ. ಮತ್ತು ಕೋಡಂಗಿ, ಆರುಮುಗಂ ಇವರುಗಳ ಮೇಲೆ ಅನುಮಾನ ಪಟ್ಟಿರುತ್ತಾನೆ. ಈ ಮೇಲ್ಕಂಡ ೫ ಜನರನ್ನು ತನಿಖೆ ಕಾಲದಲ್ಲಿ ವಿಚಾರಿಸಲು ಅವರು ಆಪಾದನೆಯನ್ನು ನಿರಾಕರಿಸಿರುತ್ತಾರೆ. ಮತ್ತು ಅವರ ಮೇಲೆ ಸರಿಯಾದ ಸಾಕ್ಷಿ ಆಧಾರಗಳು ಸಿಕ್ಕಿರುವುದಿಲ್ಲ. ತನಿಖೆ ಕಾಲದಲ್ಲಿ ಪಿರ್ಯಾದಿ ರಾಖಿಯಣ್ಣನು ತಮ್ಮ ರಾಮಲಿಂಗಂ ಇವರನ್ನು ವಿಚಾರ ಮಾಡಲಾಗಿ ಅವರು ಮೇಲ್ಕಂಡ ೫ ಜನರು ಬೆಂಕಿ ಹಾಕಿಯುತ್ತಿರುವ ವೇಳೆಯಲ್ಲಿ ಸದರಿ ಮನೆಯ ಹತ್ತಿರ ನಿಂತುಕೊಂಡಿದ್ದುದನ್ನು ಇನ್ನೊಬ್ಬ ಸಾಕ್ಷಿ ಮೈಲಪ್ಪ ಎಂಬುವರೊಡನೆ ಪ್ರತ್ಯಕ್ಷ ಕಂಡುದ್ದಾಗಿ ನುಡಿದಿರುತ್ತಾರೆ. ಸದರಿ ಎ. ಕೆ. ಮೈಲಪ್ಪ ಎಂಬುವರು ಈ ಬೆಂಕಿ ಘಟನೆ ನಡೆದ ದಿನವೇ ದೊಡ್ಡಕಟ್ಟೆ ಗ್ರಾಮ ಬಿಟ್ಟು ಅವರ ಸ್ವಂತ ಊರಾದ ತಮಿಳು ನಾಡಿಗೆ ಹೋಗಿರುತ್ತಾರೆ ಮತ್ತು ಅವರ ಅಲ್ಲಿಯ ವಿಳಾಸ ಗೊತ್ತಿರುವುದಿಲ್ಲ. ಇವರು ಊರಿಗೆ ವಾಪಸ್ಸು ಬಂದಮೇಲೆ ಅವರನ್ನು ವಿಚಾರಣೆ ಮಾಡಲಾಗುತ್ತದೆ. ಸದರಿ ಮೈಲಪ್ಪನವರ ವಿಚಾರಣೆ ಆಗಬೇಕಾಗಿರುವುದರಿಂದ ಮೇಲ್ಕಂಡ ಕೇಸಿನ ತನಿಖೆಯು ನಿಂತಿರುತ್ತೆ; ಸ್ಥಳದಲ್ಲಿ ಸನ್ನಿವೇಶ ಗಳನ್ನು ಪರಿಶೀಲಿಸಿದಲ್ಲಿ ಪಿರ್ಯಾದಿ ತಮ್ಮ ರಾಮಲಿಂಗಂ ಅವರು ಕೊಟ್ಟಿರುವ ಹೇಳಿಕೆ ಅನುಮಾನಾಸ್ಪದ ವಾಗಿಯೂ ಉದ್ದೇಶ ಪೂರ್ವಕವಾಗಿಯೂ ಇರುತ್ತದೆ.

ಹಿರಿಯೂರು ಪೋಲೀಸ್ ಠಾಣೆಯಲ್ಲಿಯಾಗಲೀ ಅಥವಾ ಹಳ್ಳಿಯಲ್ಲಿಯಾಗಲೀ ರಾಖಿಯಪ್ಪ ಎಂಬು ವನಿಗೆ ಪೋಲೀಸಿನವರು ಹೊಡೆದರೆಂಬ ಆಪಾದನೆಗಳು ಪೂರ್ತಿ ಸತ್ಯಕ್ಕೆ ದೂರವಾಗಿರುತ್ತವೆ.

ಇದಲ್ಲದೆ ಅದೇ ಗ್ರಾಮದಲ್ಲಿ ತಾರೀಖು ೧೦ನೇ ಏಪ್ರಿಲ್ ೧೯೮೦ ರಂದು ಹರಿಜನ ಜನಾಂಗದ ಕಣುಮಪ್ಪ ಅಂದರೆ ಮೇಲ್ಕಂಡ ನಾಚುವಮ್ಮತ್ತು ಒಡೆಯರ್‌ರವರ ಕೆಲಸಗಾರ, ಇವರಿಗೆ ಆರುಸ್ವಾಮಿ ಮತ್ತು ೮ ಜನರು ಹೊಲಕ್ಕೆ ಕಾಲುವೆಯಲ್ಲಿ ನೀರು ಬಿಡುವ ವಿಷಯದಲ್ಲಿ ಹೊಡೆದರೆಂಬ ಆಪಾದನೆಯ ಮೇಲೆ ಹಿರಿಯೂರು ಪೋಲೀಸ್ ಠಾಣೆ ಮೊ. ನಂ. ೪೧-೮೦ ಕಲಂ ೧೪೩, ೧೪೭, ೧೪೮, ೩೨೪ ಮತ್ತು ೧೪೯ನೇ ಐ. ಪಿ. ಸಿ. ಪ್ರಕಾರ ಕೇಸ್ ದಾಖಲು ಆಗಿದ್ದು ಈ ಕೇಸು ಹಾಲಿ ಕೋರ್ಟಿನಲ್ಲಿ ವಿಚಾರಣೆಯಲ್ಲಿ ಇರುತ್ತೆ. ಈ ಕೇಸಿನಲ್ಲಿ ಮೇಲ್ಕಂಡ ರಾಖಿಯಣ್ಣ ಮತ್ತು ಮೈಲಪ್ಪ ಇವರುಗಳು ಪ್ರತ್ಯಕ್ಷ ಕಂಡ ಸಾಕ್ಷಿಗಳಾಗಿರುತ್ತಾರೆ.

ಈ ಎಲ್ಲಾ ಮೇಲ್ಕಂಡ ಘಟನೆಗಳಿಗೆ ನಾಚುಮುತ್ತು ಒಡೆಯರ್ ಮತ್ತು ಆರುಸ್ವಾಮಿ ಈ ಎರಡು ಗುಂಪಿನ ನಡುವೆ ಇರುವ ವೈಮನಸ್ಸು ಮೂಲಕಾರಣವಾಗಿರುತ್ತೆ. ಈಗ ಊರಿನಲ್ಲಿ ವಾತಾವರಣವು ಶಾಂತ ರೀತಿಯಲ್ಲಿದ್ದು ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಮೇಲ್ಕಂಡ ೨ ಗುಂಪಿನವರ ಮೇಲೆ ಪೋಲೀಸ್ ಬಿಸ್ತುವಾರಿ ಇರುತ್ತೆ.

ಶ್ರೀ ಟಿ. ಚೌಡಯ್ಯ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳ ಹೇಳಿಕೆ ಪ್ರಕಾರ ೧೮ನೇ ಏಪ್ರಿಲ್ ೧೯೮೦ ರಂದು ಹರಿಜನ ಜನಾಂಗದ ಕಣಮಪ್ಪ ಎನ್ನುವವರ ಮೇಲೆ ಆರುಸ್ವಾಮಿ ಮತ್ತು ಎಂಟು ಜನ ಸವರ್ಣೀಯರು ಧಾಳಿ ಮಾಡಿ ಹೊಡೆದದ್ದು ಸ್ಪಷ್ಟವಾಗಿದೆ, ಈ ಪ್ರಕರಣ ಈಗ ನ್ಯಾಯಾಲಯದ ಮುಂದಿರುವುದರಿಂದ ನಾನು ಇದರ ಬಗ್ಗೆ ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ, ಇದೇ ಪ್ರಕರಣದಲ್ಲಿ ರಾಖಿಯಣ್ಣ ಮತ್ತು ಮೈಲಪ್ಪ ಇವರುಗಳು ಪ್ರತ್ಯಕ್ಷ ಸಾಕ್ಷಿಗಳಾಗಿರುತ್ತಾರೆಂದು ವರದಿಯಲ್ಲಿ ಹೇಳಲಾಗಿದೆ. ರಾಖಿಯಣ್ಣ ಸಾಕ್ಷಿ ಹೇಳಿದ ಕೆಲವ ದಿವಸಗಳ ಮೇಲೆ ಯಾರು ಅಪರಾಧಿಗಳಿದ್ದಾರೆ ಅವರು ಇವನನ್ನು ಒಂದು ಸಾಯಂಕಾಲ ನಿಲ್ಲಿಸಿಕೊಂಡು ಹೊಡೆಯುವುದಕ್ಕೆ ಪ್ರಯತ್ನಪಟ್ಟಾಗ ಗ್ರಾಮದವರೆಲ್ಲ ಸೇರಿಕೊಂಡದ್ದರಿಂದ ಹೊಡೆಯಲಾಗಲಿಲ್ಲ. ಮತ್ತೆ ಅವನನ್ನು ''ನೋಡಿಕೊಳ್ಳುತ್ತೇವೆ'' ಎಂದು ಬೆದರಿಸಿರುತ್ತಾರೆ. ಸವರ್ಣೀಯನಾಗಿ ಹರಿಜನ ಜನಾಂಗದವ ನೊಬ್ಬನಿಗೆ ಸಾಕ್ಷಿ ಹೇಳಿರುವುದರಿಂದ ಅವನನ್ನು ಬೆದರಿಸಿರುತ್ತಾರೆ. ಇದಾದ ಕೆಲವು ದಿವಸಗಳ ಮೇಲೆ ಅಂದರೆ ೨೪ನೇ ತಾರೀಖು ಬೆಳಗಿನ ಜಾವ ಇದೇ ರಾಖಿಯಣ್ಣನ ಮನೆ ಸುಟ್ಟುಹೋಗಿರುವುದೂ ಕೂಡ ಸ್ಪಷ್ಟವಾಗಿದೆ. ಇಲ್ಲಿರುವ ಮುಖ್ಯವಾದ ಅಂಶ ಒಬ್ಬ ಹರಿಜನ ಜನಾಂಗದವನೊಬ್ಬನನ್ನು ಸವರ್ಣೀಯರು ಹೊಡೆದಿರುವ ಪ್ರಕರಣದಲ್ಲಿ ಹರಿಜನ ಜನಾಂಗದವನ ಪಕ್ಕದ ಮನೆಯಲ್ಲಿ ವಾಸ ಮಾಡುವ ಒಬ್ಬ ಸವರ್ಣೀಯ ಸಾಕ್ಷಿ ಹೇಳಿದ್ದಕ್ಕೆ ಅವನ ಮನೆ ಸುಟ್ಟರು. ಮತ್ತೆ ದೂರು ಕೊಡಲಿಕ್ಕೆ ಪೋಲೀಸ್ ಠಾಣೆಗೆ ಹೊದಾಗ ಹಿರಿಯೂರು ಪೋಲೀಸ್ ಠಾಣೆಯವರು ಅವನನ್ನು ಬಿಡದೆ ಅಲ್ಲಿ ಕೂಡಿ ಹಾಕಿ ಕೊಂಡಿದ್ದು ಮೂರನೆಯ ದಿವಸ. ಅಂದರೆ, ೨೫ನೇ ತಾರೀಖು ಈತ ದೂರು ಮೇಲೆ ದೂರು ಕೊಟ್ಟಿದ್ದನೋ ಅವರನ್ನು ಕರೆಸಿ ಅವರ ಮುಂದೆ ಇವನನ್ನು ವಿಪರೀತವಾಗಿ ಹೊಡೆದಿದ್ದಾರೆ ಮತ್ತು ಈತನು ಆಸ್ಪತ್ರೆಯಲ್ಲಿ ದಾಖಲಾಗಿರುವುದಕ್ಕೆ ರಜವಾಕಿದೆ. ಈತನು ಆಸ್ಪತ್ರೆಯಲ್ಲಿ ದಾಖಲಾಗಿದ್ದುದನ್ನು ನಾನು ಕಣ್ಣಾರೆ ಕಂಡಿದ್ದೇನೆ. ನಾನು ಆಸ್ಪತ್ರೆಗೆ ಹೋಗಿ ರೋಗಿಗಳನ್ನು ಕೂಡ ಭೇಟಿ ಮಾಡಿದ್ದೇನೆ. ಪೋಲೀಸ್ ಠಾಣೆಯಿಂದ ಬಂದಂತ ಸಂದರ್ಭದಲ್ಲಿ ತೊಡೆ ಮತ್ತು ಬೆನ್ನು ಊದಿಕೊಂಡಿತ್ತು ಎಂದು ಆಸ್ಪತ್ರೆಯಲ್ಲಿದ್ದ ರೋಗಿಗಳು ಹೇಳಿದ್ದನ್ನು ನಾನು ಕಣ್ಣಾರೆ ಕಂಡಿದ್ದೇನೆ. ಇದನ್ನು ಪೋಲೀಸಿನವರು ಮುಚ್ಚಿಟ್ಟು ರುಜುವಾತು ಆಗಿಲ್ಲ ಎಂದು ಹೇಳಿದ್ದಾರೆ. ನಾನು ಖುದ್ದಾಗಿ ಎಸ್. ಪಿ. ಯವರನ್ನು ಕಂಡ ಬಿ ರೆ ಪೋಲೀಸ್ ಠಾಣೆಗೆ ತನಿಖೆ ಮಾಡಲಿಕ್ಕೆ ವಹಿಸಿಕೊಡಿ, ಹೆ. ಡೆದಂತ ಪೋಲೀಸ್‌ನವರಿಂದಲೇ ತನಿಖೆ ನಡೆಸಿದರೆ ನಿಜಾಂಶ ಗೊತ್ತಾಗುವುದಿಲ್ಲವೆಂದು ಎಸ್. ಪಿ. ಯವರ ಸಮಕ್ಷಮವೇ ಹೇಳಿದ್ದೇನೆ. ಪೋಲೀಸ್ ಠಾಣೆಗೆ ಹೋಗುವುದಕ್ಕೆ ಹರಿಜನರಿಗೆ ಧೈರ್ಯ ಇಲ್ಲ, ಇವನು ಒಬ್ಬ ಧೈರ್ಯ ಮಾಡಿ ಹೋದ. ಅಣ್ಣತಮ್ಮಂದಿರಲ್ಲಿ ಪಾರ್ಟಿ ಇರಬಹುದು. ಹರಿಜನರಿಗೆ ಸಹಾಯ ನೀಡುವುದಕ್ಕೆ ಬೇರೆ ಯವರು ಬಂದಾಗ ಪೋಲೀಸಿನವರು ಮೇಟ್ಟಿ ಸಹಾಯ ಮಾಡಬೇಕಾದದ್ದು ಅವರ ಕರ್ತವ್ಯ. ಅದನ್ನು ಬಿಟ್ಟು ಅಪರಾಧಿಗಳಿಗೆ ಎದುರಿಸಿ ಹೊಡೆದಿರತಕ್ಕಂಥದ್ದು ಸರಿಯೆ ? ಹರಿಜನರಿಗೆ ಪೋಲೀಸಿನವರಿಂದ ರಕ್ಷಣೆ ನ್ಯಾಯವಾವ ರೀತಿಯಲ್ಲಿ ದೊರೆಯುತ್ತಿಲ್ಲ. ನಾನು ತಂದಿರತಕ್ಕ ಫೋಟೋಗಳನ್ನು ಕಳುಹಿಸಿ ಕೊಡುತ್ತೇನೆ. ತಾವು ದಯವಾಡಿ ಮುಖ್ಯಮಂತ್ರಿಗಳಿಗೆ ಕಳುಹಿಸಿಕೊಡಿ, ಇದರ ಬಗ್ಗೆ ಕೂಲಂಕಷವಾಗಿ ತನಿಖೆ ಮಾಡಿಸಬೇಕೆಂದು ಹೇಳುತ್ತೇನೆ. ಕಣಮಪ್ಪನನ್ನ ಹೊಡೆದಿದ್ದಾರೆ, ಚಾರ್ಜ್‌ಷೀಟ್ ಹಾಕಿದ್ದೇ ವೆಂದು ತಿಳಿಸಿದ್ದೀರಿ ಯಾವ ತಾರೀಖಿನಲ್ಲಿ ಚಾರ್ಜ್‌ಷೀಟ್ ಹಾಕಿದ್ದೀರಿ ?

ಶ್ರೀ ಆರ್. ಗುಂಡೂರಾವ್.—ಇನ್ನು ಚಾರ್ಜ್‌ಷೀಟ್ ಹಾಕಿಲ್ಲ.

ಶ್ರೀ ಟಿ. ಚೌಡಯ್ಯ.—ತಾವು ತಮ್ಮ ಹೇಳಿಕೆಯಲ್ಲಿ ಪೋಲೀಸ್ ಠಾಣೆ ಮೊ. ನಂ. ೪೧-೮೦ ಕಲಂ ೧೪೩, ೧೪೭, ೧೪೮, ೩೨೪ ಮತ್ತು ೧೪೯ನೇ ಐ. ಪಿ. ಸಿ. ಪ್ರಕಾರ ಕೇಸು ದಾಖಲಾಗಿದ್ದು ಈ ಕೇಸು ಹಾಲಿ ಕೋರ್ಟಿನಲ್ಲಿ ವಿಚಾರಣೆಯಲ್ಲಿ ಇರುತ್ತೆ ಅಂತ ಹೇಳಿದ್ದೀರಿ, ಯಾವ ತಾರೀಖಿನಲ್ಲಿ ಚಾರ್ಜ್‌ಷೀಟ್ ಹಾಕಿದ್ದೀರಿ ?

ಶ್ರೀ ಆರ್. ಗುಂಡೂರಾವ್.—ಮೈಲಪ್ಪ ಎಂಬುವವನು ಅವನ ಸ್ವಂತ ಊರಾದ ತಮಿಳುನಾಡಿಗೆ ಹೋಗಿರುವುದರಿಂದ ಅವನ ವಿಳಾಸ ಗೊತ್ತಿರುವುದಿಲ್ಲ. ಸದ್ಯಕ್ಕೆ ವಿಚಾರಣೆ ನಿಲ್ಲಿಸಲಾಗಿರುತ್ತೆ. ೨ನೇ ಅಪರಾಧಿ ಬಗ್ಗೆ ಅಂದರೆ ಆರುಸ್ವಾಮಿ ಮತ್ತು ೮ ಜನರ ಮೇಲೆ ೧೪೩, ೧೪೭, ೧೪೮, ೩೨೪ ಮತ್ತು ೧೪೯ನೇ ಐ. ಪಿ. ಸಿ. ಪ್ರಕಾರ ಕೇಸ್ ದಾಖಲಾಗಿದ್ದು ಹಾಲಿ ಕೋರ್ಟಿನಲ್ಲಿ ಇದೆ.

ಶ್ರೀ ಟಿ. ಚೌಡಯ್ಯ.—ರಾಘವಯ್ಯಣ್ಣನನ್ನು ಪೋಲೀಸಿನವರು ಹೊಡೆದಿದ್ದಾರೆ. ಇದರ ಬಗ್ಗೆ ಸರ್ಕಾರದವರು ಬೇರೆ ಪೋಲೀಸ್ ಠಾಣೆಗೆ ಈ ವಿಷಯವನ್ನು ಒಪ್ಪಿಸಿ ತನಿಖೆ ಮಾಡಲಿಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಆರ್. ಗುಂಡೂರಾವ್.—ಎಸ್. ಪಿ. ಯವರಿಂದ ವರದಿ ಬಂದರೆ ಯೋಚನೆ ಮಾಡುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್.— ಸ್ವಾಮಿ, ಇಲ್ಲಿಯವರೆಗೆ ೫ ಇಂಥ ಘಟನೆಗಳು ನಮ್ಮ ಕ್ಷೇತ್ರದಲ್ಲಿ ನಡೆದಿರಲಿಲ್ಲ. ತಮ್ಮ ಹೇಳಿಕೆಯಲ್ಲಿ ತಿಳಿಸಿದಂತೆ ನಾಚುಮುತ್ತು ಮತ್ತು ಆತನ ಅನುಯಾಯಿಗಳು ಏನಿದ್ದಾರೆ ಅವರ ಒಂದು ಹವ್ಯಾಸದಿಂದಲೇ ಇಂಥಾ ಘಟನೆ ಆಗಿದೆ. ಈ ವಿಚಾರವನ್ನು ನಾನು ಬಹಳ ಗಂಭೀರವಾಗಿ ಹೇಳುತ್ತಿದ್ದೇನೆ, ನಾಚುಮುತ್ತು ಮತ್ತು ಆತನ ಅನುಯಾಯಿಗಳು ಏನಿದ್ದಾರೆ. ಅವರು ಏನೇನು ಮಾಡುತ್ತಿದ್ದಾರೆ ಎನ್ನುವ ಬಗ್ಗೆ ಸಿ.ಓ ಡಿ. ಗೆ ರೆಫರ್ ಮಾಡಿ ಸಮಗ್ರವಾದ ವರದಿಯನ್ನು ತರಿಸಿಕೊಂಡು ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ. ಮಾನ್ಯ ಸದಸ್ಯರಾದ ಟಿ. ಚೌಡಯ್ಯನವರು ಹೋಗಿದ್ದರು ಎನ್ನುವ ವಿಚಾರ ನನಗೆ ಗೊತ್ತಾಯಿತು. ನಾನು ಆ ಸಂದರ್ಭದಲ್ಲಿ ಬೆಂಗಳೂರಿನಲ್ಲಿಯೇ ಇದ್ದೆ, ನನಗೊಂದು ಪತ್ರ ಬರೆದಿದ್ದರೆ ನಾನು ಕೂಡ ಅವರ ಜೊತೆಗೆ ಹೋಗುತ್ತಿದ್ದೆ. ಚೌಡಯ್ಯನವರು ಹಿರಿಯೂರಿಗೆ ಬಂದು ರಾಜಕಾರಣ ಮಾಡಬೇಕಾಗಿರಲಿಲ್ಲ, ಹರಿಜನರ ಬಗ್ಗೆ ಅವರಿಗೆ ಎಷ್ಟು ಆಸಕ್ತಿ ಇದೆಯೋ ನನಗೂ ಆಷ್ಟೇ ಆಸಕ್ತಿ ಇವೆ. ಕಡಿಮೆ ಅಂತೂ ಇಲ್ಲ. ಅವರ ಕ್ಷೇತ್ರದಲ್ಲಿ ಮತ್ತೆ ದಾವಣಗೆರೆ ತಾಲ್ಲೂಕಂ ಕೂಡ ಸ್ವಲ್ಪ ಬರುತ್ತೆ, ಅಲ್ಲಿ ಬೇಕಾದಷ್ಟು ಘಟನೆಗಳು ನಡೆದರೂ ನಾನು ಹೋಗುವುದಿಲ್ಲ. ರಾಜಕಾರಣ ಮಾಡುವುದಕ್ಕೆ ಪ್ರಯತ್ನ ಪಡತಕ್ಕದ್ದು ಸರಿಯಲ್ಲ. ನಾನು ಆಗಲೇ ಹೇಳಿದಹಾಗೆ ನಾಚುಮುತ್ತು ಮತ್ತು ಆತನ ಅನುಯಾಯಿಗಳು ತನ್ನ ತಂಗಿ ವಿರುದ್ಧ ಕೇಸ್ ಹಾಕಿ ನಡೆಸುತ್ತಿದ್ದಾರೆ. ಶಾಂತತೆ ಕಲಕುವುದು ಸ್ವಾಭಾವ ಮಾಡುವಂತಹ ಪ್ರವೃತ್ತಿಯೇ ಆತನಲ್ಲಿದೆ. ಅಧಿಕಾರಿಗಳು ಕೂಡ ಕೆಲಸ ಮಾಡುವುದು ಕಷ್ಟ ಇದೆ. ಇವತ್ತು ಹರಿಜನರು ಅಂತ ಹೇಳಿಬಿಟು ಏನು ಮಾಡುವುದಕ್ಕೆ ಸಿದ್ಧರಿದ್ದಾರೆ. ಕಳೆದ ೨೦ ವರ್ಷಗಳಿಂದ ಮಸಿಯಪ್ಪನವರು ಸದಸ್ಯರಾಗಿದ್ದಾರೆ; ಒಂದು ಘಟನೆ ನಡೆದಿರಲಿಲ್ಲ. ಈ ವಿಚಾರವನ್ನು ಸಿ. ಓ. ಡಿ. ಗೆ ಕಳುಹಿಸಿ ಕೂಲಂಕುಷವಾಗಿ ಪರಿಶೀಲನೆ ಮಾಡಿ ನಿಜಾಂಶವನ್ನು ತರಿಸಿನೋಡಿ, ನಂತರ ನಾಚುಮುತ್ತು ಮತ್ತು ಆತನ ಅನುಯಾಯಿಗಳ ಮೇಲೆ ಕಾನೂನು ಪ್ರಕಾರ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳಿ.

ಶ್ರೀ ಟಿ. ಚೌಡಯ್ಯ .— ನಾನು ರಂಗನಾಥರವರ ಬಗ್ಗೆ ಬಹಳ ಗೌರವ ಇಟ್ಟುಕೊಂಡಿದ್ದೆ ಇವತ್ತಿಗೂ ಇಟ್ಟುಕೊಂಡಿದ್ದೇನೆ. ಹಿರಿಯೂರು ತಾಲ್ಲೂಕಿನಲ್ಲಿ ರಾಜಕೀಯ ಮಾಡುತ್ತಿದ್ದೇನೆಂದು ಅವರು ಹೇಳಿದರು.

ಅಧ್ಯಕ್ಷರು .— ವಾಸ್ತವಿಕ ಅಂಶವನ್ನು ಬಿಟ್ಟು ನೀವು ಬೇರೆ ವಿಚಾರಕ್ಕೆ ಹೋಗಬೇಡಿ.

ಶ್ರೀ ಟಿ. ಚೌಡಯ್ಯ .— ಅಲ್ಲಿ ನಡೆದಿರತಕ್ಕ ಘಟನೆಗಳ ವಿವರಗಳನ್ನು ಕೊಡಬೇಕಾಗುತ್ತದೆ. ಅವರು ಮಾತನಾಡುವುದಕ್ಕೆ ಅವಕಾಶ ಕೊಟ್ಟಿಲ್ಲವೆ?

ಅಧ್ಯಕ್ಷರು.— ನಾನು ಅವರು ಮಾತನಾಡುವುದಕ್ಕೆ ಮುಂಚೆ ಅವರು ಇಂಥ ವಿಷಯ ಮಾತನಾಡುತ್ತಾರೆಂದು ನಾನು ಹೇಗೆ ಹೇಳಲಿ. ಮಾನ್ಯ ಮುಖ್ಯ ಮಂತ್ರಿಗಳು ಏನು ಉತ್ತರ ಕೊಡುತ್ತಾರೆ ನೋಡೋಣ.

ಶ್ರೀ ಟಿ. ಚೌಡಯ್ಯ .— ಅವರು ರಾಜಕಾರಣ ಮಾಡುತ್ತಾರೆಂದು ಹೇಳಿದರು.....

ಅಧ್ಯಕ್ಷರು .— ನಾನು ನನ್ನ ಕ್ಷೇತ್ರಕ್ಕೆ ಸಂಬಂಧಿಸಿದ್ದು ಅಂತ ಹೇಳಿದ್ದರಿಂದ ಅವರಿಗೆ ಅವಕಾಶ ಕೊಟ್ಟೆ. ಅಧ್ಯಕ್ಷರ ಮೇಲೆ ಪರ್‌ಸಿಸ್ಟ್ ಮಾಡಬೇಡಿ.

ಶ್ರೀ ಮೈಕೇಲ್ ಫರ್ನಾಂಡೀಸ್ .— ಒಂದು ತಿದ್ದುಪಾಟು ಆಗಬೇಕು.

ಅಧ್ಯಕ್ಷರು .— ಇಲ್ಲ; ಇಲ್ಲ.

ಶ್ರೀ ಟಿ. ಚೌಡಯ್ಯ .— ಅವರು ರಾಜಕಾರಣ ಅಂತ ಹೇಳಿದ್ದಾರೆ; ಅದಕ್ಕೆ ನಾನು ಉತ್ತರ ಕೊಡಬೇಡವೆ? ಹರಿಜನರ ಮೇಲೆ ಎಲ್ಲಿ ಅತ್ಯಾಚಾರ ನಡೆದರೂ ಹರಿಜನನಾಗಿ ನಾನು ಹೋಗುವುದಕ್ಕೆ ಹಕ್ಕು ಇದೆ.

ಶ್ರೀ ಆರ್. ಎಸ್. ಪಾಟೀಲ್ .— ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಶ್ರೀ ಕೆ. ಎಚ್. ರಂಗನಾಥ ಅವರು ಮಾತನಾಡುತ್ತಾ ಮಾನ್ಯ ಸದಸ್ಯರಾದ ಚೌಡಯ್ಯನವರು ರಾಜಕಾರಣ ಮಾಡಬಾರದಿತ್ತು ಅಂತ ಹೇಳಿದರು. ಮಾನ್ಯ ಚೌಡಯ್ಯನವರು ಪತ್ರ ಬರೆದಿದ್ದರೆ ನಾನು ಕೂಡ ಹೋಗುತ್ತಿದ್ದೆ ಎಂದು ಹೇಳಿದ್ದಾರೆ. ಅವರು ರಾಜಕಾರಣ ಮಾಡುತ್ತಾರೆ ಅಂತ ಹೇಳಿದಾಗ ಮಾನ್ಯ ಚೌಡಯ್ಯನವರು ಉತ್ತರ ಹೇಳದೆ ಹೋದರೆ ಅವರ ಹಕ್ಕಿಗೆ ಚ್ಯುತಿ ತಂದಂತಾಗುವುದಿಲ್ಲವೇ?

ಅಧ್ಯಕ್ಷರು .— ಗಮನ ಸೆಳೆಯುವ ಸೂಚನೆಯ ಮೇಲೆ ಈ ತರಹ ಹೇಳಿಕೆಯನ್ನು ಹೇಳಲಿಕ್ಕೆ ಅವಕಾಶ ಇದೆಯೇ ಎನ್ನುವುದನ್ನು ಮಾನ್ಯ ಸದಸ್ಯರಾದ ಶ್ರೀ ಕೆ.ಎಚ್. ರಂಗನಾಥ್ ಅವರೇ ಹೇಳಬೇಕು. ಮಾನ್ಯ ಸದಸ್ಯರು ಸ್ವಲ್ಪ ಯೋಚನೆ ಮಾಡಿ ಮಾತನಾಡಬೇಕು. ನಮಗೆ ಇಂತಹ ಕಷ್ಟ ಸ್ಥಿತಿಗೆ ಸಿಕ್ಕಿಸ ಬಾರದು.

ಶ್ರೀ ಚೌಡಯ್ಯ .— ಅಧ್ಯಕ್ಷರೆ, ನಾನು ಅವರಿಗೆ ಸ್ಪಷ್ಟಪಡಿಸುತ್ತೇನೆ.

ಅಧ್ಯಕ್ಷರು .— ಮಾನ್ಯ ಶ್ರೀ ಕೆ. ಎಚ್. ರಂಗನಾಥ ಅವರು ಈ ತರಹ ಹೇಳುತ್ತಾರೆಂದು ನಾನು ತಿಳಿದುಕೊಂಡಿರಲಿಲ್ಲ. ಗಮನ ಸೆಳೆಯುವ ಸೂಚನೆಯ ಬಗ್ಗೆ ವಿವರ ಕೊಡಬಹುದು ಅಂತ ತಿಳಿದುಕೊಂಡಿದ್ದೆ. I am sorry, such a statement by Sri K. H. Ranganath was not at all necessary on a call attention notice. The hon. member may please resume his seat. The Chief Minister will reply to the clarification.

SRI K. H. RANGANATH .— Sir, there is some reflection from the Chair on my conduct here.

MR. SPEAKER .— I have not permitted the hon. member. ಇಲ್ಲಿ ರಾಜಕಾರಣದ ವಿಚಾರ ತರಬಾರದು. ಇದು ಸರಿಯಾದುದು ಅಲ್ಲ.

SRI K. H. RANGANATH .— I am more concerned about my rights.

ಅಧ್ಯಕ್ಷರು .— ಈ ಮನೆಯನ್ನು ತಪ್ಪು ದಾರಿಗೆ ಎಳೆಯಬಾರದು. ತಾವು ಮಾತನಾಡಿದರೆ ಅವರು ಮಾತನಾಡ ತ್ತಾರೆ.

SRI B. B. SAYANAK .— Sir, I am on a point of order. Sir, on a call attention notice only members who have given notice should be allowed to ask one or two clarifications, but not others. This is the practice in Parliament also.

MR. SPEAKER.— What the hon. member says is absolutely correct. I allowed Sri K. H. Ranganath to seek a clarification because he comes from that constituency. But in his clarification he referred to some personal matters in which neither I nor the House is interested.

ಶ್ರೀ ಕೆ. ಎಚ್. ರಂಗನಾಥ .—ಅಧ್ಯಕ್ಷರೆ. ನಾನು ಅವರ ಬಗ್ಗೆ ಮಾತನಾಡುವುದಿಲ್ಲ.

SRI C. M. ARUMUGHAM .— Sir, Sri K. H. Ranganath was a former Minister and he wants to give some explanation. I request you to please allow him.

(Some hon. members stood up)

MR. SPEAKER .— I appeal to the members to resume their seats. If I allow other members who are not signatories to the call atten-

tion notice to speak, it will create a bad precedent. When Sri K. H. Ranganath stood up I though he wants to seek a clarification and since he comes from that constituency, I allowed him. But some personal matter was raised by him and the other member wants to rebut it.

SRI K. H RANGANATH .— Sir, I request you to please allow me to say a few words.

MR SPEAKER .— I have not permitted the hon. member. He may please resume his seat. I appeal to the members to keep silence. ನಾನು ಯಾವ ಸದಸ್ಯರನ್ನು ಕರೆಯುತ್ತೇನೆ ಆ ಸದಸ್ಯರು ಮಾತನಾಡಬೇಕು.

3-00 P.M.

ಶ್ರೀ ಹಾರನಹಳ್ಳಿ ರಾಮಸ್ವಾಮಿ — ಹಿರಿಯ ಸದಸ್ಯರಾದ ಶ್ರೀಮಾನ್ ರಂಗನಾಥರವರು ಈ ಮನೆಯ ಸದಸ್ಯರಾಗಿ ಅವರು ಹೇಳುವುದನ್ನು ಹೇಳಲಿ ಅದಕ್ಕೆ ನಮ್ಮ ಆಭ್ಯಂತರ ಇಲ್ಲ ಏನು ಬೇಕಾದರೂ ಹೇಳುವುದಕ್ಕೆ ತಾವು ಅವರಿಗೆ ಅವಕಾಶ ಕೊಡಬಹುದು. ಆದರೆ ಅವರು ಮಾತನಾಡುವಾಗ ವೈಯಕ್ತಿಕವಾಗಿ ಶ್ರೀಮಾನ್ ಚೌಡಯ್ಯನವರ ಮೇಲೆ ಬಲವಾದಂತಹ ಆಪಾದನೆ ಮಾಡಿದ್ದಾರೆ. ಅದಕ್ಕೆ ಶ್ರೀಮಾನ್ ಚೌಡಯ್ಯನವರು ಉತ್ತರ ಕೊಡಬೇಕು. ನಂತರ ಶ್ರೀಮಾನ್ ರಂಗನಾಥರವರಿಗೆ ಬೇಕಾದರೆ ಅವಕಾಶ ಕೊಡಿ. ಆದರೆ ತಾವು ಈಗ ಕೊಟ್ಟಿರತಕ್ಕಂತಹ ತೀರ್ಪು ಸರಿಯಾಗಿದೆ, ಆದರೂ ಶ್ರೀಮಾನ್ ಚೌಡಯ್ಯನವರು ತಾವು ಹೇಳಿದ ಮೇಲೆ ಕುಳಿತುಕೊಂಡರು. ಆದರೆ ಶ್ರೀಮಾನ್ ರಂಗನಾಥರವರು ಮಾತನಾಡಿದಮೇಲೆ ಶ್ರೀಮಾನ್ ಚೌಡಯ್ಯನವರಿಗೆ ಉತ್ತರ ಕೊಡುವುದಕ್ಕೆ ಅವಕಾಶ ಇರಬೇಕು. ಇಷ್ಟೇ ವಿಷಯ.

(hon. Member Sri K. H. Ranganath stood up to speak)

ಅಧ್ಯಕ್ಷರು .— ತಾವು ಏಕೆ ಈ ದಿವಸ ಆತುರ ಪಡುತ್ತಿದ್ದೀರಿ. ದಯವಮಾಡಿ ಕುಳಿತುಕೊಳ್ಳಿ.

ಶ್ರೀ ಕೆ ಎಚ್. ರಂಗನಾಥ .— ನಾನು ಏನು ಹೇಳಿದ ಎಂಬುದನ್ನು ತಾವಾಗಲೀ ಅಥವಾ ಸಭೆಯಾಗಲಿ ಗಮನಿಸಲಿಲ್ಲ. ನಾನು ಏನನ್ನು ಹೇಳುವುದಕ್ಕೋಸ್ಕರ ನಿಂತೆ ಎಂಬುದನ್ನು ಯಾರೂ ಗಮನಿಸಲಿಲ್ಲ.

ಅಧ್ಯಕ್ಷರು .— ಏನು ಹೇಳುತ್ತಿದ್ದೇನೆಂದರೆ ತಾವು ವೈಯಕ್ತಿಕವಾಗಿ ಆರೋಪಣೆ ಮಾಡಿದ್ದೀರಿ ಅಂತ ಅವರು ಹೇಳುತ್ತಿದ್ದಾರೆ. ನೀವು ಹೇಳಿದಮೇಲೆ, ಅವರಿಗೆ ಅವಕಾಶ ಕೊಡಬೇಕೋ ಬೇಡವೋ... He is also a Member of this House. He is also entitled to say. Now he should be given an opportunity. If you want to say something more, afterwards, I will give a chance to you.

(INTERRUPTIONS)

SRI V. MASIYAPPA .—I rise to a point of order ತಾವು ಆಪ್ಪಣೆಕೊಡಿಸಿದ್ದೀರಿ. ಶ್ರೀಮಾನ್ ರಂಗನಾಥರವರು ಈ ರೀತಿ ಮಾತನಾಡಿದರು. ವೈಯಕ್ತಿಕವಾಗಿ ಆರೋಪ ಮಾಡಿದ್ದಾರೆ ಎಂಬುದಾಗಿ ತಾವು ಹೇಳಿದ ಮೇಲೆ ಅದರ ಬಗ್ಗೆ ವಿವರಣೆ ಕೊಡಬೇಕೆಂದು ಅವರು ಕೇಳುತ್ತಿದ್ದಾರೆ. ಅವರು ವೈಯಕ್ತಿಕವಾಗಿ ವಿವರಣೆಯನ್ನು ಕೊಡತಕ್ಕಂತಹ ಅವಕಾಶ ಕೊಡಿ ಅವರು ಏನು ಹೇಳುತ್ತಾರೆಂಬುದನ್ನು ಈ ಸಭೆಯ ಗಮನಕ್ಕೆ ತರುವುದಕ್ಕೆ ಅವರಿಗೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು .— ಶ್ರೀಮಾನ್ ಚೌಡಯ್ಯನವರಿಗೆ ಅವಕಾಶ ಮೊದಲು ಕೊಡಬಾರದಾ?

Why should I not give an opportunity to him also?

ಶ್ರೀ ಟಿ. ಚೌಡಯ್ಯ.— ಮೊಟ್ಟಮೊದಲನೆಯದಾಗಿ ನಾನು ಹೇಳುವುದೇನೆಂದರೆ ಶ್ರೀಮಾನ್ ರಂಗನಾಥರವರು ನಾನೂ ಬಾಲ್ಯ ಸ್ನೇಹಿತರು. ಕ್ಲಾಸ್ ಮೆಟ್ಸ್, ಒಂದೇ ಪಕ್ಷದಲ್ಲಿ ಇದ್ದಂತಹವರು, ಅವರ ಒಗ್ಗೆ ವೈಯಕ್ತಿಕವಾಗಿ ಅಥವಾ ರಾಜಕೀಯ ಭಿನ್ನಾಭಿಪ್ರಾಯದಲ್ಲಾಗಲೀ ಬೇರೆ ರಾಜಕಾರಣದಲ್ಲಾಗಲೀ, ವೈಮನಸ್ಸನ್ನು ಇಟ್ಟು ಕೊಂಡಿಲ್ಲ. ಇಂದು ತುಂಬಿದ ಸಭೆಯಲ್ಲಿ ಶ್ರೀ ಚೌಡಯ್ಯನವರು ರಾಜಕೀಯ ಮಾಡುತ್ತಾರೆ ಎಂಬುದಾಗಿ ಹೇಳಿದ್ದು ಖಂಡಿತವಾಗಿ ನನ್ನ ಒಂದು ಹಕ್ಕಿಗೆ ಚ್ಯುತಿ ಬರತಕ್ಕಂತಹ ವಿಚಾರವಾಗಿದೆ. ಆದ್ದರಿಂದ ಅದನ್ನು ರೆಕಾರ್ಡಿನಿಂದ ತೆಗೆಸಬೇಕು. ಖಂಡಿತವಾಗಿ ನಾನು ರಾಜಕೀಯ ಮಾಡತಕ್ಕಂತಹವನಲ್ಲ.

I am a constructive worker and fundamentally. I am a social worker. ಸಮಾಜದ ಕಾರ್ಯಕರ್ತನಾಗಿ ಕೆಲಸ ಮಾಡುವಾಗ ಯಾವುದೇ ವಿಚಾರ ನನ್ನ ಗಮನಕ್ಕೆ ಬಂದ ಮೇಲೆ ಸ್ಥಳಕ್ಕೆ ಹೋಗಿ ಸ್ವಂತ: ನೋಡತಕ್ಕಂತಹದ್ದು ಮೊದಲಿನಿಂದಲೂ ಒಂದು ಅಭ್ಯಾಸ. ಜಿಲೆ ಯಲ್ಲೇ ಅಲ್ಲ. ಬೇರೆ ಎಲ್ಲಿಯಾದರೂ ಇಂತಹವುಗಳ ಬಗ್ಗೆ ದೂರು ಬಂದಾಗ ಸ್ಥಳಕ್ಕೆ ಹೋಗುವುದು ನನ್ನ ಮೊಟ್ಟಮೊದಲ ಕರ್ತವ್ಯ ಎಂಬುದಾಗಿ ನಾನು ತಿಳಿದು ಕೊಂಡಿದ್ದೇನೆ ನಾನು ಸ್ಥಳಕ್ಕೆ ಹೋಗಿದ್ದೇನೆ. ಎಲ್ಲ ವಿಚಾರಗಳನ್ನು ತಿಳಿದು ಕೊಂಡು ಸತ್ಯಾಂಶವನ್ನು ಸಂಗ್ರಹಣೆ ಮಾಡಿಕೊಂಡು ಈ ಸಭೆಯ ಗಮನಕ್ಕೆ ತಂದಿದ್ದೇನೆ. ಶ್ರೀಮಾನ್ ರಂಗನಾಥರವರು ಏನಾದರೂ ಮಾಡಿಕೊಳ್ಳಲಿ ಅದು ನನಗೆ ಬೇಕಾಗಿಲ್ಲ. ಅವರನ್ನು ಜೊತೆಗೆ ಕರೆದುಕೊಂಡು ಹೋಗುವ ಅವಶ್ಯಕತೆ ನನಗಿರಲಿಲ್ಲ ಅದರ ಅವಶ್ಯಕತೆ ಇಲ್ಲ ಎಂಬುದಾಗಿ ನಾನು ತಿಳಿದುಕೊಂಡಿದ್ದೇನೆ. ಅವರ ಜೊತೆ ನಾನು ಏಕೆ ಹೋಗಬೇಕು? As an Advocate, as a Social Worker, as a Legislator of the District, I can go to any place and find out the truth and do my best in the interest of the down-trodden and weaker sections who are helpless. The helpessness which I found in that place was that the people were telling so may instances of that type. They were telling that they are not able even to approach the Police people. That is the situation prevailing there. I approached the Police Officers also and told them several times not to give room for such things and all that. The Circle Inspector also came round and he requested not to bring this matter the Government level and all that, and again I approached the Superintendent of Police also. All these things were made clear and I never uttered a singleword anywhere before any bodody also about political affairs. This all what I wanted to say. Further, I want to make it clear that I have nothing to do with political m tters, After this is over, one of his friends phoned to me saying: ನೀವೂ ಮತ್ತು ದೇವರಾಜ ಅರಸುರವರು ಈ ತಾಲ್ಲೂಕಿಗೆ ಕಾಲಿಟ್ಟರೆ ಕಲ್ಲುಹೊಡೆಸುತ್ತೇನೆ ಎಂದು ಹೇಳಿದ್ದಾರೆ.

I don't want to bring this to the notice of the House but because he has raised that point, I have to say all these things.

ಶ್ರೀ ಎಂ. ವೀರಪ್ಪ ಮೊಯಿಲಿ.— ಮಾನ್ಯ ಚೌಡಯ್ಯನವರು ಗಮನ ಸೆಳೆಯುವ ಸೂಚನೆಯನ್ನು ತಂದು ಕೊಟ್ಟಿದ್ದಾರೆ. ಇದು ಮಾನ್ಯ ರಂಗನಾಥರವರ ಕ್ಷೇತ್ರಕ್ಕೆ ಸಂಬಂಧಪಟ್ಟಂತಹ ವಿಚಾರ. ಸೌಜನ್ಯದ ದೃಷ್ಟಿಯಿಂದ ಶ್ರೀಮಾನ್ ರಂಗನಾಥರವರು ವಿವರಣೆಯನ್ನು ಕೇಳತಕ್ಕಂತಹದ್ದು ಧರ್ಮ. ಅವರೂ ಕೂಡ ಹರಿಜನ ಮುಖಂಡರು ಇದ್ದಾರೆ.

ಶ್ರೀ ಬಿ. ಬಸವಲಿಂಗಪ್ಪ.— ಹರಿಜನರು ಎಂಬುದನ್ನು ನೀವು ಬಿಡುವಹಾಗೇ ಇಲ್ಲವೇ?

ಶ್ರೀ ಎಂ. ವೀರಪ್ಪ ಮೊಯ್ಲಿ.—ಇಂಗ್ಲೀಷ್‌ನಲ್ಲಿ ಶೆಡ್ಯೂಲ್ಡ್ ಕ್ಯಾಸ್ಟ್ ಎಂಬುದಾಗಿ ಹೇಳೋಣ. ಶ್ರೀಮಾನ್ ಚೌಡಯ್ಯನವರು ಪ್ರಸ್ತಾಪ ಮಾಡುತ್ತಾ, ಶ್ರೀಮಾನ್ ರಂಗನಾಥ್ ರವರ ಕ್ಷೇತ್ರದಲ್ಲಿ

ಹರಿಜನರಿಗೆ ರಕ್ಷಣೆ ಇಲ್ಲ, ಮತ್ತು ರಕ್ಷಣೆ ಕೊಡುವವರು ಯಾರೂ ಇಲ್ಲ ಎಂದು ಹೇಳಿದಾಗ...That is also a direct allegation against the Member, who is an Ex Minister. When he makes an allegation, naturally, you have to give a chance or opportunity to that Member al o. Of course, he has said—Let us direct our question only towards the issue in question and let us not politicalise the issue. Sir, I don't find anything offending as far as that statement is concerned. In reply, Sri Chowdaiah further makes an allegation which directly affects the Member.

SRI M. C. NANAIAH.—Are we here to defend each other on the floor of the House?

** ** **

(Interruptions)

MR. SPEAKER.—Don't record.

** ** **

ಶ್ರೀ ಆರ್ ಗುಂಡೂರಾವ್. —ಬಹಳ ಮುಖ್ಯ ವಿಷಯವನ್ನು ಎತ್ತಿದ್ದಾರೆ. ಶ್ರೀಮಾನ್ ಚೌಡಯ್ಯನವರು ದೊಡ್ಡ ಘಟನೆ ನಡೆದಿದೆ ಎಂಬುದಾಗಿ ಹೇಳಿದ್ದಾರೆ ಮಾನ್ಯ ಶ್ರೀಮಾನ್ ರಂಗನಾಥ್ ರವರು ಅದರ ಬಗ್ಗೆ ವಿವರಣೆ ಕೊಡುತ್ತಾ, ಕೆಲವು ಸಲಹೆಗಳನ್ನೂ ಕೊಟ್ಟಿದ್ದಾರೆ. ಈ ಮಧ್ಯೆ ಇವರು ವೈಯಕ್ತಿಕವಾಗಿ ಮಾತನಾಡುತ್ತಿರುವುದರಿಂದ, ನಾನು ಈ ಪ್ರಶ್ನೆಗೆ ಉತ್ತರ ಕೊಡುವ ದೃಷ್ಟಿಯಿಂದ ವಿಷಯದ ಬಗ್ಗೆ ಏನು ಮಾಡಬೇಕು ಎಂಬುದರ ಮಹತ್ವನಿಂತು ಹೋಯಿತು. ಕೆಲವು ವಿಶೇಷವಾದ ವಿಚಾರಣೆಯನ್ನು ಮಾಡಿಸಿ ಎಂಬುದಾಗಿ ಶ್ರೀಮಾನ್ ಚೌಡಯ್ಯನವರು ಹೇಳಿದ್ದಾರೆ. ಹಾಗೇ ಮಾನ್ಯ ಸದಸ್ಯರಾಗಿರತಕ್ಕಂತಹ ಶ್ರೀಮಾನ್ ರಂಗನಾಥ್‌ರವರು ಅಲ್ಲಿ ೨-೩ ಜನ ಇದ್ದಾರೆ. ನಾಚುಮುತ್ತು, ಇವರ ಅಣ್ಣ ತಮ್ಮಂದಿರು ಇದ್ದಾರೆ. ಇವರು ಇದೇ ತರಹ ಕೆಲಸ ಮಾಡುತ್ತಿದ್ದಾರೆ. ಆದ್ದರಿಂದ ಹೊಸದಾಗಿ ಸಿ.ಓ ಡಿ. ಯನ್ನು ಅಲ್ಲಿಗೆ ಕಳುಹಿಸಿ ವಿಚಾರಣೆಯನ್ನು ಮಾಡಿ ತಕ್ಕ ಬಂದೊಬಸ್ತು ಮಾಡಿಸಿ ಎಂದು ಅವರು ಹೇಳಿದ್ದಾರೆ. ಈ ಎರಡರ ಬಗ್ಗೆ ಸಮಾಧಾನವಾದ ಉತ್ತರ ಕೊಡುತ್ತೇನೆ, ಆದ್ದರಿಂದ ಇದನ್ನು ಇಲ್ಲಿಗೇ ನಿಲ್ಲಿಸೋಣ. ಇದರ ಬಗ್ಗೆ ಶ್ರೀಮಾನ್ ರಂಗನಾಥ್‌ರವರು.....

SRI K. H. RANGANATH.—I am very much hurt today. In my 20 years experience of this House, I am very much hurt today. The Hon. Chief Minister may kindly bear with me. ಮಾನ್ಯ ಅಧ್ಯಕ್ಷರೆ, ತಾವು ಸ್ವಲ್ಪ ಸಭೆಯನ್ನು ಶಾಂತ ರೀತಿಯಿಂದ ನಡೆಸಿಕೊಂಡು ಹೋದರೆ ನಮ್ಮಂಥವರೂ ಈ ಸಭೆಯಲ್ಲಿ ಭಾಗವಹಿಸಬೇಕೆಂದು ಮನಸ್ಸು ಆಗುತ್ತದೆ. ಇಲ್ಲದಿದ್ದರೆ ನಾವು ಇಲ್ಲಿಗೆ ಬಂದು ರುಜು ಹಾಕಿ, ಸಭೆಯಲ್ಲಿ ಭಾಗವಹಿಸದೇ ಹಾಗೇ ಹೋಗಬೇಕಾಗುತ್ತದೆ. ಇಲ್ಲಿ ಬಂದು ಸದಸ್ಯರು ತಮ್ಮ ಹಕ್ಕುಗಳನ್ನು ಪ್ರತಿಪಾದನೆ ಮಾತಿಕೊಳ್ಳುವುದಕ್ಕೆ ಅವಕಾಶ ಇಲ್ಲವೆಂದು ಹೇಳುವುದಾದರೆ, ಯಾರಾದರೂ ಏನನ್ನಾದರೂ ಹೇಳಿದ್ದನ್ನು ಕೇಳಿಕೊಂಡು ಹೋಗಬಹುದು ಎಂದು ಹೇಳುವುದಾದರೆ ಹೇಗೆ? ಅದು ಸರಿಯೋ ತಪ್ಪೋ ಎಂಬುದನ್ನು ಹೇಳದಿದ್ದರೆ ಪ್ರಯೋಜನವಿಲ್ಲ. I am very much hurt today. I have been a Member of this August House since many many years. ನಾನು ಮಾತನಾಡುತ್ತಿರುವಾಗ ನೀವು ಮಕ್ಕಳನ್ನು ಆಡಿಸುವಹಾಗೆ ಕುಳಿತುಕೊಳ್ಳಿ, ಕುಳಿತುಕೊಳ್ಳಿ, ಎಂದು ಹೇಳುವುದಾದರೆ ನಾವು ಇಲ್ಲಿ ಏಕೆ ಇರಬೇಕು? I have enjoyed many many privileges in this House collectively as well as individualy. Those privileges can never be eroded by anybody and I do not allow them to be

** As ordered by the Chair the matter was not recorded.

eroded. ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಏನು ಕೇಳಿಕೊಂಡೆ ಎಂದರೆ, ನನ್ನ ಕ್ಷೇತ್ರದಲ್ಲಿ ಇಂತಹ ಒಂದು ದೌರ್ಜನ್ಯ ನಡೆದಿದೆ ಅಲ್ಲಿ ಆಗಿರತಕ್ಕ ಪರಿಸ್ಥಿತಿ ಇದು, ಸಿ.ಓ.ಡಿ. ಯವರನ್ನು ಕಳುಹಿಸಿ ವಿಚಾರ ಮಾಡಿ ಎಂದು. Let the Hon. Chief Minister send the Intelligence there to see whether there is anything in 155 villages. I know people by name in my Constituency. I have secured highest votes and I have been maintaining the same. I request the Hon. Chief Minister to send the Intelligence to 155 villages of my constituency and get it verified whether the officials have been theatening villagers. Let the report be brought and placed before the Hou e. It is a sad reflection on my political carrier and I don't want to allow this to take place here ಸ್ವಾಮಿ ನಾನು ತಮ್ಮನ್ನು ಕೇಳಿಕೊಳ್ಳುತ್ತಾ ಇದ್ದೆ. ಕ್ಲಾರಿಫಿಕೇಷನ್ ಎಂದು ಅವಕಾಶ ಕೇಳಿಕೊಂಡೆ. ನನಗೆ ಅವಕಾಶವನ್ನು ಕೊಡಬಾರದಾಗಿತ್ತೆಂದು ಮಾನ್ಯ ಸದಸ್ಯರೊಬ್ಬರು ಹೇಳಿದರು. ನಾನು ಏನು ಮಾತನಾಡಬಾರದ್ದನ್ನು ಮಾತನಾಡಿದೆ? This is a word which has gone into the proceedings. Do you think that I am going home with these things. Instead of carrying this rubbish thing, I would resign my Membership as a clean man and go home. ಸ್ವಾಮಿ ಏನು ನಾನು ಮಾತನಾಡಿದೆ. ಮಾನ್ಯ ಸದಸ್ಯರಾದ ಚೌಡಯ್ಯನವರು ನನ್ನನ್ನೂ ಕರೆದುಕೊಂಡು ಹೋಗಿದ್ದರೆ ನಾನೂ ಬರುತ್ತಾ ಇದ್ದೆ ಎಂದು. With thd intention of helping the police and the harijans I told all these things Further, I submit, let there be a C.O.D. enquiry in this regard because I never told anything. ರಾಜಕೀಯ ಮಾಡುತ್ತಿದ್ದೇನೆಂದು ಹೇಳಿದರು, ಶ್ರೀಮಾನ್ ಚೌಡಯ್ಯನವರು ರಾಜಕೀಯಕ್ಕೆ ಹೊಸಬರು. ಒಂದು ವೇಳೆ ನಾನು ಬಾಯಿತಪ್ಪಿ ಹೇಳಿದ್ದರೆ ನಾನು I would apologise for that because this House is supreme. ರಾಜಕೀಯದಲ್ಲಿ ನನ್ನ ಕ್ಷೇತ್ರದಲ್ಲಿ ಏನು ಮಾಡಿದರೂ ಆಗುವುದಿಲ್ಲ. ಆ ಮಾತು ಬೇರೆ. But, he is telling that police are threatening the people. It is not correct and it is a sad reflection on my conduct Let the Hon Chief Minister send the Intelligence Dept. Officials and conduct an enquiry and place the report before the House. Only because we enjoy certain privileges here, we cannot abuse the officials unecessarily. ಈ ಸಭೆಯಲ್ಲಿ ಮಾತನಾಡುವುದಕ್ಕೆ ಅವಕಾಶ ಇದೆ, ಯಾರು ಬೇಕಾದರೂ, ಏನು ಬೇಕಾದರೂ ಮಾತನಾಡಬಹುದು. ಪಾಪ, ಅಧಿಕಾರಿಗಳು ಇಲ್ಲಿ ಹೇಳುವುದಕ್ಕೆ ಇರುವುದಿಲ್ಲ. ನಾನು ಈ ಕ್ಷೇತ್ರದಿಂದ ಎರಡು ಸಾರಿ ಗೆದ್ದು ಬಂದಿದ್ದೇನೆ. ಮಾನ್ಯ ಮಸಿಯಪ್ಪನವರು ಮೂರು ಸಾರಿ ಗೆದ್ದು ಬಂದಿದ್ದಾರೆ. ಇಲ್ಲಿ ಸುಮಾರು ೧೫೦ ಹಳ್ಳಿಗಳು ಇವೆ. ಇಲ್ಲಿಯ ಅನಾಹುತದ ಬಗ್ಗೆ ಪೋಲೀಸ್ ರೆಕಾರ್ಡ್ ತರಿಸಿ ಸರ್ಕಾರ ಬೇಕಾದರೆ ನೋಡಲಿ. This is not a small thing. ಮಾನ್ಯ ಅಧ್ಯಕ್ಷರ ಬಾಯಿಂದ ಒಂದು ಮಾತು ಬಂತು, ಮಾನ್ಯ ರಂಗನಾಥ್ ಅವರು ಈ ಮಾತನ್ನು ಹೇಳುತ್ತಾರೆಂದರೆ ನಾನು ಅವಕಾಶವನ್ನು ಕೊಡುತ್ತಾ ಇರಲಿಲ್ಲವೆಂದು ಹೇಳಿದರು. I do not want to carry that rebuke from the Chair is not justified in that.

MR. SPEAKER.—Such a reference.....

SRI K. H. RANGANATH.—Speaker is supposed to.....

SRI B. B. SAYANAK.—The hon. Member Sri K. H. Ranganath is a seasoned Parliamentarian. He is casting aspersions against the Hon. Chair.

SRI K. H. RANGANATH.—I am not casting aspersions against the Chair.

SRI B.B. SAYANAK.—You are a seasoned parliamentarian.

ಅಧ್ಯಕ್ಷರು.—ಮಾನ್ಯ ಸದಸ್ಯರನ್ನು ಡಿಸ್ಟರ್ಬ್ ಮಾಡಬೇಡಿ.

SRI K H. RANGANATH.—Sir, this House is collectively supreme but not individually. It is the wish of the House which has to be upheld by the speaker. With this, I appeal to the Speaker. ಸ್ವಾಮಿ ತಾವು ಮಾತನಾಡಬಾರದು ಎಂದಾಗ ತಾವು ಗಮನಿಸಲಿಲ್ಲವೊ ಏನೋ ಎಂದು ನಾನು ಕೇಳಿಕೊಂಡು ವಿಶ್ಲೇಷಿಸುತ್ತಿದ್ದೆ. But " Things have taken different shape ". ಮಾನ್ಯ ಸದಸ್ಯರಾದ ಶ್ರೀ ಚೌಡಯ್ಯನವರು ವಿರೋಧ ಪಕ್ಷದಲ್ಲಿದ್ದಾರೆ. ಇಲ್ಲಿ ಲಾ ಅಂಡ್ ಆರ್ಡರ್ ವಿಷಯದ ಪರಿಸ್ಥಿತಿ ಬಗ್ಗೆ ಬರುತ್ತದೆ. ಇಲ್ಲಿ ಮಾನ್ಯ ಮುಖ್ಯ ಮಂತ್ರಿಗಳ ಒಂದು ಹೊಣೆ ಇರತಕ್ಕದ್ದು ನ್ಯಾಚುರಲ್ ಎಲ್ಲೆಲ್ಲಿ ಯಾವ ಯಾವ ಅಧಿಕಾರಿಗಳು ಏನು ಮಾಡುತ್ತಿದ್ದಾರೆ, ಪೋಲೀಸ್ ಅಧಿಕಾರಿಗಳು ಏನು ಮಾಡಿದ್ದಾರೆ ಎಂಬುದನ್ನು ತಿಳಿದುಕೊಳ್ಳಲಿ. ಯಾವುದಾದರೂ ಒಂದು ವಿಚಾರದಲ್ಲಿ ನಾನು ಮಂತ್ರಿಯಾಗಿದ್ದಾಗ ಹಾಗೂ ಆದಕ್ಕಿಂತಲೂ ಮುಂಚೆ ನಾನು ಯಾವ ಅಧಿಕಾರಿಗಳೊಂದಿಗೂ ಶಾಮೀಲಾಗಿಲ್ಲ. ಜೋಕಾದರೆ ಆ ಬಗ್ಗೆ ವರದಿಯನ್ನು ತರಿಸಿಕೊಳ್ಳಿ. ಆದರಲ್ಲಿ ಸತ್ಯಾಂಶವಿದ್ದರೆ ನಾನು ಒಪ್ಪುತ್ತೇನೆ. ಇಲ್ಲದಿದ್ದರೆ I would resign my Membership and go away. I do not want to exist here as a Member merely for my belly's sake.

(ಮಾನ್ಯ ಸದಸ್ಯರಾದ ಶ್ರೀ ಚೌಡಯ್ಯನವರು ಎದ್ದು ನಿಂತರು)

ಅಧ್ಯಕ್ಷರು.—ಮಾನ್ಯ ಚೌಡಯ್ಯನವರು ಕುಳಿತುಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ಗುಂಡೂರಾವ್.—ಇಲ್ಲಿ ಇಬ್ಬರ ಮನಸ್ಸಿನಲ್ಲಿಯೂ ಒಂದೇ ವಿಚಾರ ಇದೆ. ಈ ತರಹ ನಡೆಯಬಾರದಾಗಿತ್ತು. ಅಲ್ಲಿ ಕೆಲವು ಜನರು ಸೇರಿಕೊಂಡು ಹುಂಡಾಟಿಕೆ ರೀತಿ ನಡೆದುಕೊಂಡು ತೊಂದರೆ ಕೊಡುತ್ತಿದ್ದಾರೆ, ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಸಲಹೆಯನ್ನು ಕೊಟ್ಟಿದ್ದಾರೆ. ಮಾನ್ಯ ಸದಸ್ಯರಾದ ರಂಗನಾಥ್ ಅವರು ಸಲಹೆ ಕೊಟ್ಟಿದ್ದಾರೆ. ಆಲ್ಲಿರತಕ್ಕದ್ದನ್ನು ಹೇಳಿದ್ದಾರೆ. ಶ್ರೀ ರಂಗನಾಥ್ ಅವರು ಆಲ್ಲಿ ಅಧಿಕಾರಿಗಳು ಯಾವ ರೀತಿ ನಡೆದುಕೊಳ್ಳುತ್ತಿದ್ದಾರೆಂಬುದರ ಬಗ್ಗೆ ವಿಚಾರಣೆ ನಡೆಸಿ ಆಲ್ಲಿಯ ವರದಿಯನ್ನು ತರಿಸಿ ಎಂದು ಹೇಳಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳೂಡನೆ ವಿಶೇಷ ವಿಚಾರಣೆಯನ್ನು ನಡೆಸಿ ಆ ವರದಿಯನ್ನು ತರಿಸುತ್ತೇನೆಂದು ತಿಳಿಸುತ್ತೇನೆ. ಇದು ರಕ್ಷಣೆ ಕೊಡುವ ವಿಚಾರವಲ್ಲ. ಸೂಕ್ತ ವಿಚಾರಣೆಗೆ ತೆಗೆದುಕೊಳ್ಳಲಾಗುವುದು.

SRI AZEEZ SAIT. ಶ್ರೀಮಾನ್ ರಂಗನಾಥ್ ಅವರು ಮಾತನಾಡಿದರು. When once he is elected, he is a Member of the State Legislature, not of a particular Constituency. I do not know why the Hon. Member Sri Ranganath is so much offended. ಆಮೇಲೆ ಮಾತನಾಡುತ್ತಾ ಆಲ್ಲಿಯ ಪೋಲೀಸ್ ಅಧಿಕಾರಿಗಳು ಬಹಳ ಒಳ್ಳೆಯವರು, ಸುಮ್ಮನೆ ಆಪಾದನೆ ಮಾಡುತ್ತಿದ್ದಾರೆ. ವಿರೋಧ ಪಕ್ಷದವರಿಗೆ ಆಪಾದನೆ ಮಾಡುವುದಕ್ಕೆ ಪೂರ್ತಿ ಹಕ್ಕು ಇದೆ, ನಾವು ರೂಲಿಂಗ್ ಪಾರ್ಟಿಯಲ್ಲಿ ಇದ್ದೇವೆ ಎಂದು. ಆ ರೀತಿ ಅವರು ನೋಡಬಾರದು ಆ ರೀತಿ ಡಿಸ್‌ಕರೇಜ್ ಮಾಡಬಾರದೆಂದು ಹೇಳಿ what is the result of his speech, instead of supporting the depressed people, he has got more fancy to support officials. That is the complaint of Sri Chowdaiah because Sri Ranganath is appreciating officials and depreciating the backward classes. ಈ ರೀತಿ ಪೋಲೀಸ್ ಅಧಿಕಾರಿಗಳಿಗೆ ಸಪೋರ್ಟ್ ಮಾಡಿದರೆ, ಅವರು ಒಳ್ಳೆಯ ದಾರಿ ಬಿಟ್ಟು ಕೆಟ್ಟದಾರಿಗೆ ಹೋಗುತ್ತಾರೆ. ಇವರು ರೂಲಿಂಗ್ ಪಾರ್ಟಿಯಲ್ಲಿ ಇದ್ದಾರೆ. ಇವರು ರೂಲಿಂಗ್ ಪಾರ್ಟಿ ಮೆಂಬರ್ ಆಗಿರುವುದರಿಂದ ಇವರ ಮಾತನ್ನು ಕೇಳುತ್ತಿದ್ದಾರೆ. ವಿರೋಧ ಪಕ್ಷದವರ ಮಾತನ್ನು ಕೇಳುವುದಿಲ್ಲ. ಆ ಕ್ಷೇತ್ರಕ್ಕೆ ಬಂದರೆ ಕಲ್ಲು ಹೊಡೆಯುತ್ತೇ

ಎಂದು ಹೇಳಬೇಕಾದರೆ ಹೇಗೆ? ರಾಣೇಬೆನ್ನೂರಿನಲ್ಲಿ ಪೋಲೀಸ್ ಸ್ಟೇಷನ್‌ನಲ್ಲಿ ಕಂಪ್ಲೇಂಟ್ ಕೊಡುವುದಕ್ಕೆ ಹೋದವರ ಮನೆಯಲ್ಲೇ ಕಳ್ಳತನಗಳು ಆಗುತ್ತವೆ. ಶ್ರೀಮಾನ್ ಕೆ. ಎಚ್. ರಂಗನಾಥ್ ಅವರು ಈ ವಿಷಯದಲ್ಲಿ ಸ್ವಲ್ಪ ತಿಳಿದುಕೊಂಡರೆ, ಅಷ್ಟು ಆಫೆಂಡ್ ಆಗುವುದಕ್ಕೆ ಕಾರಣವಿಲ್ಲ.

(iii) Rural electrification work in North Canara District

SMT. ANASUYA G. SHARMA.—Sir, I call the attention of the Chief Minister to the slow progress of rural electrification work in North Kanara District.

SRI R. GUNDU RAO.—I wish to make the following statement.

Out of the 1295 revenue villages in the Uttara Kannada district 455 villages were electrified as on 31-3-1980 A total number of 3828 irrigation pumpsets have been serviced in this District.

2 The Rural Electrification Corporationhas so far sanctioned eight schemes for this District at a total cost of Rs. 290.33 lakhs. These schemes cover eight out of the eleven taluks in this District. These sanctioned schemes envisage electrification of 407 villages and energisation of 2350 irrigation pumpesets. Under these eight REC schemes, we have so far electrified 108 villages and energised 410 irrigation pumsets. Further works under these REC schemes are in progress.

3 During 1980-81, the KEB has planned to electrify 50 villages and energise 1250 pumpsets in Uttara Kannada District.

4 The progress under the rural electrification scheme has been held up to some extent due to shortage of conductors, insulators and transformers. In certain cases there has been delay in obtaining the approval of the Forest Department for jungle clearing for laying transmission and distribution lines.

5 The Karnataka Electricity Board has taken action for improving the supply position of conductors and transformers. The supply position of insulators continue to be unsatisfactory. The KEB is exploring various alternative sources for supply of insulators. As regards jungle clearing, it will be ensured that there is more co-ordination between the KEB and Forest Department in future.

6 The Government attaches considerable importance to the Rural Electrification Programme. All necessary action will be taken both at the Government and the KEB level to ensure that progress under this programme is stepped up.

ಶ್ರೀಮತಿ ಅನುಸೂಯ ಗಜಾನನ ಶರ್ಮ.—ಈಗ ತಮ್ಮ ಉತ್ತರದಿಂದ ಹೆಚ್ಚಿನ ತೊಂದರೆ ಇರುವ ವಿಷಯ ತಿಳಿಯಿತೆ ಹೊರತು; ನನಗೆ ಗೊತ್ತಿರುವ ಹಾಗೆ ಆಲ್ಲಿ ಇರತಕ್ಕ ತೊಂದರೆ ಏನು ಎಂದರೆ ಜೂನಿಯರ್ ಇಂಜಿನಿಯರ್ಸ್, ಅಸಿಸ್ಟೆಂಟ್ ಇಂಜಿನಿಯರ್ಸ್ ಇವರ ಕೊರತೆಯಿಂದಾಗಿ ೧೯೭೮-೭೯-ಅಂತೇ ಸಾಲಿನಲ್ಲಿ ಆಗಬೇಕಾದಂಥ ಕೆಲಸಗಳು ಇನ್ನೂ ವರೆಗೆ ಆಗಿಲ್ಲದಿರುವ ಬಗ್ಗೆ ನಾನು ಬಹಳ ವಿಷಾದ